ಕೂಡ ರಸ್ತೆಯಲ್ಲಿ ಹೋಗುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಸರ್ಕಾರದ ವ್ಯಾಪ್ತಿಗೆ ಬರತಕ್ಕಂಥ ಒಂದೊಂದು ತಾಲ್ಲೂಕಿಗೆ 1 ಕೋಟಿ ರೂಪಾಯಿಗಳನ್ನಾದರೂ ತುರ್ತಾಗಿ ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಡಾ: ಹೆಚ್. ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರುಗಳ ಕಾಳಜಿ ನನಗೆ ಅರ್ಥವಾಗಿದೆ. ಈಗಾಗಲೇ ನಾನು ಹೇಳಿದ ಹಾಗೆ, ಸುಮಾರು 748 ಕಿ.ಮೀ ಉದ್ದದ ರಸ್ತೆಗೆ 14 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಬೇಕೆಂದು ಒಂದು ಅಂದಾಜು ಇಟ್ಟುಕೊಂಡಿದ್ದಾರೆ. ಆದರೆ, ಕೂಡಲೇ ಎಲ್ಲ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ 2 ಕೋಟಿ 52 ಲಕ್ಷ ರೂಪಾಯಿಗಳಷ್ಟು ಅಂದಾಜು ಇಟ್ಟುಕೊಂಡಿದ್ದೇವೆ. ಮತ್ತೆ ನಮಗೆ ಲಭ್ಯ ಆಗತಕ್ಕಂಥ ಹಣಕಾಸಿನ ಮಾಹಿತಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಈ ರಸ್ತೆಗಳ ಪ್ರಾಮುಖ್ಯತೆಯನ್ನೂ ಗಮನದಲ್ಲಿಟ್ಟುಕೊಂಡು, ಅವುಗಳನ್ನು ದುರಸ್ಥಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಅಗತ್ಯ ಬಿದ್ದರೆ ಮಾನ್ಯ ಸದಸ್ಯರುಗಳನ್ನು ಕರೆದು ಬೇರೆ ಬೇರೆ ಟ್ಯಾಕ್ಸ್‌ನಲ್ಲಿ ಕೊಡುವುದರ ಬಗ್ಗೆ ಚರ್ಚೆ ಮಾಡಿ ಇದರ ಬಗ್ಗೆ ಒಂದು ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರುಗಳಿಗೆ ನಾನು ಭರವಸೆ ಕೊಡುವುದಕ್ಕೆ ಬಯಸುತ್ತೇನೆ.

(ಉ) ವಿಷಯ :– ಭಾಲ್ಕಿ ತಾಲ್ಲೂಕಿನ ಗ್ರಾಮಾಂತರ ವಿಭಾಗದಲ್ಲಿ ಮಂಜೂರಾಗಿರುವ ವಿವಿಧ ವಸತಿ ಯೋಜನೆಗಳ ತಡೆಯುಂಟಾಗಿರುವುದರಿಂದ ಬಡ ಫಲಾನುಭವಿಗಳು ಗುಡಿಸಲುಗಳನ್ನು ಕಳೆದುಕೊಂಡಿರುವ ಬಗ್ಗೆ.

ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) :– ಮಾನ್ಯ ಉಪಾಧ್ಯಕ್ಷರೆ, ನಾನು ಕಳೆದ ಸಲ ಶಾಸಕನಾಗಿದ್ದ ಸಂದರ್ಭದಲ್ಲಿ ನನ್ನ ಭಾಲ್ಕಿ ಕ್ಷೇತ್ರದಲ್ಲಿ ಸುಮಾರು 2000 ಮನೆಗಳನ್ನು ನಾವು ಹಂಚಿದ್ದೆವು. ಇದರಲ್ಲಿ ವಿಶೇಷವಾಗಿ ಬಿ.ಜೆ.ಪಿ. ಶಾಸಕನಾಗಿರುವ ನಾನು ಅದರ ಅಧ್ಯಕ್ಷನಾಗಿದ್ದು ಉಳಿದ ನಾಲ್ಕು ಜನ ಸದಸ್ಯರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿದ್ದರು. ಆ ಸಂದರ್ಭದಲ್ಲಿ ನಾವೆಲ್ಲರೂ ಕುಳಿತು ತೀರ್ಮಾನ ಮಾಡಿ ಈ ಮನೆಗಳನ್ನು ಹಂಚಿಕೆ ಮಾಡಿದ ನಂತರ ಇದರ ಬಗ್ಗೆ ಕೋರ್ಟ್‌ಗೆ ಹೋಗಿ ಒಂದು ವರ್ಷವಾಯಿತು. ಆಶ್ರಯ ಫಲಾನುಭವಿಗಳು ಈಗ ಅಲ್ಲಿದ್ದಂಥ ಮನೆಗಳಿಗೆ ಬೇಸ್‌ಮೆಂಟ್ ಮಾಡಿಕೊಂಡು ಕುಳಿತುಕೊಂಡಿದ್ದಾರೆ. ಇದರ ಬಗ್ಗೆ ಸರ್ಕಾರದ ಕಡೆಯಿಂದ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈಗಾಗಲೇ ಒಂದು ವರ್ಷವಾಗಿದೆ. ಅವರು ಇದ್ದ ಮನೆಗಳ ಬಾಗಿಲುಗಳೆಲ್ಲವನ್ನೂ ತೆಗೆದು ಬಿಸಿಲು ಮತ್ತು ಮಳೆಯಲ್ಲಿ ಅವರು ಕುಳಿತುಕೊಂಡಿದ್ದಾರೆ. ಸರ್ಕಾರದ ವತಿಯಿಂದ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇವತ್ತಿನದಿವಸ ಹೈಕೋರ್ಟ್‌ಗೆ ಯಾರು ಅಟೆಂಡ್ ಆಗಬೇಕೆಂಬುದರ ಬಗ್ಗೆ ಇವರು ತೀರ್ಮಾನ ತೆಗೆದುಕೊಂಡಿಲ್ಲ. ಈ ರೀತಿಯಾದರೆ ಅಲ್ಲಿ ನಿರ್ಮಾಣ ಮಾಡಬೆಕಾಗಿರತಕ್ಕಂಥ ಸುಮಾರು 2 ಸಾವಿರ ಮನೆಗಳು ಇನ್ನು 10 ವರ್ಷಗಳಾದರೂ ಹಾಗೆಯೇ ಉಳಿಯುತ್ತವೆ. ಕಾರಣವೇನೆಂದರೆ, ಹೈಕೋರ್ಟ್‌ನಲ್ಲಿ ಯಾರೂ ಅಟೆಂಡ್ ಮಾಡದಿದ್ದರೆ ಇದು ಹಾಗೆಯೇ ಉಳಿಯುತ್ತದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಸ್ಪಷ್ಟವಾಗಿ ಇಲ್ಲಿ ತಿಳಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಆಂಜನಮೂರ್ತಿ (ವಸತಿ ಸಚಿವರು) , :– ಮಾನ್ಯ ಉಪಾಧ್ಯಕ್ಷರೆ, ಭಾಲ್ಕಿ ತಾಲ್ಲೂಕಿನ ಗ್ರಾಮಾಂತರ ವಿಭಾಗದಲ್ಲಿ 2003–2004 ರಲ್ಲಿ ನೀಡಿದ ಗುರಿ, ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಯೋಜನೆ	ಗುರಿ	ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ
1	ಗ್ರಾಮೀಣ ಆಶ್ರಯ	530	530
2	ನವಗ್ರಾಮ ಆಶ್ರಯ	200	200
3	ಎಸ್. ಸಿ. ತಾಂಡ	290	290
4	ಗ್ರಾಮೀಣ ಅಂಬೇಡ್ಕರ್	103	103
	ಒಟ್ಟು	**1123**	**1123**

ಮೇಲ್ಕಂಡ ಯೋಜನೆಗಳಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳ ಪಟ್ಟಿಗಳನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಮೂರು 'ರಿಟ್ ಪಿಟಿಶನ್'ಗಳು ದಾಖಲಾಗಿದ್ದವು.

ನ್ಯಾಯಾಲಯದಲ್ಲಿ ಫಲಾನುಭವಿಗಳ ಪಟ್ಟಿಗಳನ್ನು ಪ್ರಶ್ನಿಸಿದ್ದು, ನ್ಯಾಯಾಲಯವು ಫಲಾನುಭವಿಗಳ ಪಟ್ಟಿಗಳಿಗೆ 'ಸ್ಟೇ' ನೀಡಿದ್ದರಿಂದ ಯಾವುದೇ ಫಲಾನುಭವಿಗಳಿಗೆ ಕಾಮಗಾರಿ ಆದೇಶ ನೀಡಿರುವುದಿಲ್ಲ. ಆದ್ದರಿಂದ ಆಯ್ಕೆಯಾದ ಫಲಾನುಭವಿಗಳು ತಮ್ಮ ಗುಡಿಸಲು ನೆಲಸಮ ಮಾಡಿ ತಳಪಾಯ ಮುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಯೋಜನೆ ನಿಯಮಗಳ ಪ್ರಕಾರ ಮನೆಗಳ ಕಾಮಗಾರಿ ಆದೇಶ ಪಡೆಯದ ಹೊರತು ಫಲಾನುಭವಿಗಳು ಮನೆಗಳ ಕಾಮಗಾರಿ ಪ್ರಾರಂಭಿಸಲಾಗದು ಎಂಬುದನ್ನು ಇಲ್ಲಿ ಗಮನಿಸಬಹುದು.

ಫಲಾನುಭವಿಗಳಿಗೆ ಇದರಿಂದ ಆಗಿರುವ ತೊಂದರೆ ನಿವಾರಿಸಲು ಜಿಲ್ಲಾಡಳಿತ ಪ್ರಯತ್ನ ಮಾಡುತ್ತಿದೆ. ಸದರಿ ಪ್ರಯತ್ನದಿಂದ ಒಂದು 'ರಿಟ್ ಪಿಟಿಶನ್' ಅನ್ನು ಕಕ್ಷಿದಾರರು ಹಿಂಪಡೆದಿದ್ದು ಇನ್ನೊಂದರಲ್ಲಿ 'ಸ್ಟೇ' ಯನ್ನು ಉಚ್ಚ ನ್ಯಾಯಾಲಯವು ವೆಕೇಟ್ ಮಾಡಿದೆ. ಈ ಮೂರು ನ್ಯಾಯಾಲಯಗಳ ಪ್ರಕರಣಗಳ ವಿವರಗಳು ಕೆಳಗಿನಂತಿವೆ.

ಕ್ರಮ ಸಂ.	ರಿಟ್ ಪಿಟಿಶನ್ ಸಂಖ್ಯೆ	ತೆಗೆದುಕೊಂಡಿರುವ ಕ್ರಮ
1	8569/04	ಈ 'ರಿಟ್ ಪಿಟಿಶನ್' ಅನ್ನು ಕಕ್ಷಿದಾರರು ದಿನಾಂಕ –06/03/04ರಲ್ಲಿ ಹಿಂದಕ್ಕೆ ಪಡೆದಿದ್ದಾರೆ. ಉಚ್ಚ ನ್ಯಾಯಾಲಯವು ನೀಡಿದ
2	27847–855/04	'ಸ್ಟೇ' ಯನ್ನು ಉಚ್ಚ ನ್ಯಾಯಾಲಯವು ದಿನಾಂಕ–25/05/05ರಂದು 'ವೆಕೇಟ್' ಮಾಡಿದೆ. ಈ ಪ್ರಕರಣವನ್ನು
3	28113–122/04	ಇತ್ಯರ್ಥಗೊಳಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದರ್; ಇವರು ಕಂಡಿಕೆವಾರು ಮಾಹಿತಿಯನ್ನು ಸರ್ಕಾರಿ ನ್ಯಾಯವಾದಿಗಳ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿದ್ದು. ಆದಷ್ಟು ಬೇಗ ಈ ಪ್ರಕರಣವನ್ನು ಇತ್ಯರ್ಥಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಮೇಲ್ಕಂಡ ಇನ್ನೊಂದು ಪ್ರಕರವನ್ನು ಇತ್ಯರ್ಥಗೊಳಿಸಲು ಪ್ರಯತ್ನಿಸಲಾಗುತ್ತಿದೆ.

ಮೇಲ್ಕಂಡ ಇನ್ನೊಂದು ಪ್ರಕರಣ ಇತ್ಯರ್ಥವಾದರೆ, ಮನೆಗಳ ಹಂಚಿಕೆಯ ಕಾರ್ಯ ನಿಯಮಾನುಸಾರ ಮುಂದುವರೆಸಲು ಅನುಕೂಲವಾಗುತ್ತದೆ.

ಶ್ರೀ ಪ್ರಕಾಶ್ ಖಂಡ್ರೆ :– ಮಾನ್ಯ ಉಪಾಧ್ಯಕ್ಷರು; ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳುತ್ತಿದ್ದಾರೆ. ಆದರೆ, ಸರ್ಕಾರ ಏನು ಮಾಡುತ್ತಿದೆ ಎಂದರೆ, ಭಾಲ್ಕಿ ಪಟ್ಟಣದಲ್ಲಿ ಇದೇರೀತಿಯಾಗಿ 1350 ಮನೆಗಳನ್ನು ಆಯ್ಕೆ ಮಾಡಲಾಗಿತ್ತು. ಆದರೆ, ಇವುಗಳ ಮೇಲೆ ಏನು ಮಾಡಲಾಗಿದೆ ಎಂದರೆ, ಮಾನ್ಯ ಹಿರಿಯ ನಾಯಕರಾಗಿರತಕ್ಕಂಥ ಮಾನ್ಯ ಮುಖ್ಯಮಂತ್ರಿಯವರು ಈ ಮನೆಗಳ ಬಗ್ಗೆ ಸಿ.ಓ.ಡಿ. ತನಿಖೆ ಮಾಡಿಸಿದ್ದಾರೆ. ನಾನು ಈಗಾಗಲೇ ಹೇಳಿರತಕ್ಕಂಥ ಆಶ್ರಯ ಮನೆಗಳ ಬಗ್ಗೆ ಅಲ್ಲಿ ಕೋರ್ಟ್ ಕೇಸ್ ಇದೆ ಮತ್ತೆ ಭಾಲ್ಕಿ ಪಟ್ಟಣದಲ್ಲಿರುವ ಮನೆಗಳ ಬಗ್ಗೆ ಸಿ.ಓ.ಡಿ. ತನಿಖೆ ನಡೆಯುತ್ತಿದೆ. ಇವತ್ತಿನದಿವಸ ಕರ್ನಾಟಕ ರಾಜ್ಯದಲ್ಲಿ ಆಶ್ರಯ ಮನೆಗಳ ಬಗ್ಗೆ ಎಲ್ಲಿಯಾದರೂ ಸಿ.ಓ.ಡಿ. ತನಿಖೆ ನಡೆಯುತ್ತಿದೆಯೆ? ಆದರೆ, ಇವತ್ತಿನದಿವಸ ಭಾಲ್ಕಿ ಕ್ಷೇತ್ರದಲ್ಲಿ ಈ ರೀತಿ ಏಕೆ ಆಗುತ್ತಿದೆ? ಈಗಾಗಲೇ 1350 ಫಲಾನುಭವಿಗಳನ್ನು ಅಂತಿಮವಾಗಿ ಆಯ್ಕೆ ಮಾಡಲಾಗಿದೆ. ಒಂದು ಸಲ ಫಲಾನುಭವಿಗಳು ಫೈನಲ್ ಆದ ನಂತರ ಅವರೇನು ಮಾಡುತ್ತಾರೆ? ಬೇಸ್‌ಮೆಂಟ್ ಕಟ್ಟಬಾರದೆಂದು ಹೇಳುತ್ತೀರಿ. ನೀವು ವರ್ಕ್ ಆರ್ಡರ್ ಕೊಡುವುದಕ್ಕಿಂತ ಮುಂಚಿತವಾಗಿಯೇ ಅವರು ಬೇಸ್‌ಮೆಂಟ್ ಮಾಡುವುದಕ್ಕೆ ಹೋಗುತ್ತಾರೆ. ಏಕೆಂದರೆ, ಈ ರೀತಿಯಾದ ಒಂದು ಪದ್ದತಿ ನಡೆಯುತ್ತಿದೆ. ಇವತ್ತು ಅವರೆಲ್ಲಾ ಬೇಸ್‌ಮೆಂಟ್ ಮಾಡಿಕೊಂಡು ಕುಳಿತುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಭಾಲ್ಕಿ ಪಟ್ಟಣದಲ್ಲಿರಕ್ಕಂಥ 1530 ಆಶ್ರಯ ಮನೆಗಳು ಮತ್ತು ಅಂಬೇಡ್ಕರ್ ಮನೆಗಳ ಮೇಲೆ ಏನು ಸಿ.ಓ.ಡಿ. ತನಿಖೆ ಮಾಡಲಾಗುತ್ತಿದೆ, ಈ ಒಂದು ಕಾರ್ಯ ಈಗಾಗಲೇ ಮುಗಿದಿರಬಹುದು. ಅಲ್ಲಿರತಕ್ಕಂಥ ಫಲಾನುಭವಿಗಳು ಒಂದು ವರ್ಷದಿಂದ ಮನೆಗಳಿಲ್ಲದೆ ಬಿಸಿಲು, ಮಳೆಯಲ್ಲಿ ಕುಳಿತುಕೊಂಡಿದ್ದಾರೆ. ಆದ್ದರಿಂದ, 15 ದಿವಸ ಅಥವಾ ಇನ್ನು ಒಂದು ತಿಂಗಳ ಒಳಗೆ ಆ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಿ. ಸಿ.ಓ.ಡಿ. ತನಿಖೆಯಾದ ಮೇಲೆ ಮನೆ ತೆಗೆದುಕೊಳ್ಳುವುದಕ್ಕೆ ಯಾರು ಯೋಗ್ಯರಿಲ್ಲವೆಂದು ತಿಳಿದರೆ ಕ್ಯಾನ್ಸಲ್ ಮಾಡುವುದಕ್ಕೆ ಆರ್ಡರ್ ಮಾಡಿ. ಅವರು ಯೋಗ್ಯರಿದ್ದರೆ ಅವರಿಗೆ ಮನೆ ಕೊಡಿ. ಈಗಾಗಲೇ ಇದ್ದಂಥ ಮನೆಗಳನ್ನು ಕಳೆದುಕೊಂಡು ಬಹಳ ತೊಂದರೆಯಲ್ಲಿ ಅವರು ಇದ್ದಾರೆ. ಆದ್ದರಿಂದ ಅವರಿಗೆ ಆದಷ್ಟು ಬೇಗ ಮನೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆಂಜನಮೂರ್ತಿ :– ಮಾನ್ಯ ಉಪಾಧ್ಯಕ್ಷರೆ, ನನ್ನ ಉತ್ತರ ಸ್ಪಷ್ಟವಾಗಿದೆ. ಫಲಾನುಭವಿಗಳ ಆಯ್ಕೆಯಾದನಂತರ ಅವರು ಪಾಯ ಹಾಕುವುದಕ್ಕೆ ಅಥವಾ ಇರತಕ್ಕಂಥ ಮನೆ ಕೆಡುವುದಕ್ಕೆ ಸಾಧ್ಯವಿದೆ. ಆದರೆ, ಇಲ್ಲಿ ಇವರು ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕಿಂತ ಮೊದಲೇ ವಾಸವಾಗಿದ್ದಂಥ ಗುಡಿಸಲುಗಳನ್ನು ಅಥವಾ ಮತ್ತೊಂದು, ಮಗದೊಂದು ಕೆಡಿವಿಕೊಂಡು ಇವತ್ತಿನದಿವಸ ಅವರೆಲ್ಲರೂ ಬೀದಿ ಪಾಲಾಗಿದ್ದಾರೆ. ಇದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಮತ್ತೆ ಮಾನವೀಯತೆ ದೃಷ್ಟಿ ಕೂಡ ಬೇರೆ. ಆದರೆ, ಈಗಾಗಲೇ ಮೂರು ರಿಟ್ ಪಿಟಿಷನ್ ಹೈಕೋರ್ಟ್ ಮುಂದೆ ಇದ್ದು, ಈಗಾಗಲೇ ಎರಡು ಸ್ಟೇ ಆರ್ಡರ್‌ನ್ನು ವೆಕೇಟ್ ಮಾಡಿಸಿದ್ದೇವೆ. ಇನ್ನೊಂದು ಇನ್ನು ನ್ಯಾಯಾಲಯದಲ್ಲಿ ಪೆಂಡಿಂಗ್ ಇದೆ. ತಾವು ಈಗಾಗಲೇ ಹೇಳಿದಹಾಗೆ ಲೋಕಾಯುಕ್ತ, ವಿಜೆಲೆನ್ಸ್‌ಗೆ ಕೊಟ್ಟಿರತಕ್ಕಂಥದ್ದು ಇನ್ನೂ ಪೆಂಡಿಂಗ್ ಇದೆ. ತಾವು ಮಾನ್ಯ ಮುಖ್ಯಮಂತ್ರಿಗಳನ್ನು

ಕೋರಿಕೊಂಡಿದ್ದೀರಿ. ಇದರ ಬಗ್ಗೆ ಆದಷ್ಟು ಜಾಗ್ರತೆ ತನಿಖೆಯನ್ನು ಪೂರ್ಣಗೊಳಿಸಿ ಅಲ್ಲಿ ಬಿಸಿಲು ಅಥವಾ ಮಳೆಯಲ್ಲಿ ವಾಸ ಮಾಡತಕ್ಕಂತಹ ಜನರಿಗೆ ಆದಷ್ಟು ಜಾಗ್ರತೆ ಪೂರ್ಣ ನಿವೇಶನವನ್ನು ಕೊಡುವುದಕ್ಕೆ ಪ್ರಯತ್ನ ಪಡುತ್ತೇವೆಂದು ತಮಗೆ ತಿಳಿಸುತ್ತಿದ್ದೇನೆ.

ಉಪಾಧ್ಯಕ್ಷರು :– ಮಾನ್ಯ ಖಂಡ್ರೆಯವರೆ, ತಮ್ಮದು ಆಯಿತು, ತಾವು ಕುಳಿತುಕೊಳ್ಳಿ.

ಶ್ರೀ ಪ್ರಕಾಶ್ ಖಂಡ್ರೆ : ಫಲಾನುಭವಿಗಳ ಮನೆಗಳನ್ನು ಕೆಡವಿದ್ದಾರೆ. ಅವರೆಲ್ಲರೂ ಜೋಪಡಿಯಲ್ಲಿ ವಾಸ ಮಾಡುತ್ತಿದ್ದಾರೆ. ಆಗ ಮನೆ ಕೆಡುವಂತಹ ಪ್ರಶ್ನೆಯೇ ಇಲ್ಲ. ಇದ್ದಂತಹ ಜೋಪಡಿಯನ್ನು ತೆಗೆದು ಅವರು ಕುಳಿತಿದ್ದಾರೆ. ಮನೆಯಿದ್ದವರಿಗೆ ಮನೆ ಕೊಡುವ ಪ್ರಶ್ನೆ ಇಲ್ಲ. ಮನೆ ಇದ್ದವರಿಗೆ ಮನೆಯನ್ನು ಕೆಡವಿ ಮತ್ತೊಂದು ಮನೆಯನ್ನು ಕಟ್ಟುವ ಪ್ರಶ್ನೆ ಇಲ್ಲ.

9. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :–ಕರ್ನಾಟಕ ರಾಜ್ಯದಲ್ಲಿ ನಕಲಿ ಪೆಟ್ರೋಲ್ ಮಾರಾಟ ತಡೆಗಟ್ಟಲು ಕಾನೂನು ಕ್ರಮ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ನಕಲಿ ಪೆಟ್ರೋಲ್ ಹೇರಳವಾಗಿ ಮಾರಾಟವಾಗುತ್ತಿದೆ. ಇಡೀ ರಾಜ್ಯದ ವ್ಯಾಪ್ತಿಯಾಗಿ ನಕಲಿ ಪೆಟ್ರೋಲ್ ಚಲಾವಣೆಯಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಮತ್ತು ಹಳ್ಳಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಾ ಕಡೆಗಳಲ್ಲಿ ಈ ನಕಲಿ ಪೆಟ್ರೋಲ್ ನಡೆಯುತ್ತಿದೆ. ಒಂದು ಲೀಟರ್‌ಗೆ ಸುಮಾರು 30 ರೂಪಾಯಿಗಳಂತೆ ಮಾರುತ್ತಾರೆ. ಪೆಟ್ರೋಲ್‌ಗೆ ಕೆಮಿಕಲ್ಸ್ ಮಿಕ್ಸ್ ಮಾಡಿ ಮಾರುತ್ತಾರೆ. ಸುಮಾರು ದಿವಸಗಳಿಂದ ಈ ದಂಧೆಯು ಹೇರಳವಾಗಿ ನಡೆಯುತ್ತಿದೆ. ಸರ್ಕಾರ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದೆ, ಇವುಗಳೆಲ್ಲವೂ ಕಾನೂನು ಬಾಹಿರವೆಂದು ಹೇಳುತ್ತಿದೆ, ಈ ನಕಲಿ ಪೆಟ್ರೋಲ್‌ನ್ನು ಮಾರಾಟ ಮಾಡುತ್ತಿರುವ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ, ಎಲ್ಲಿ ಕ್ರಮವನ್ನು ತೆಗೆದುಕೊಂಡಿದ್ದೀರಿ, ಇದರ ಬಗ್ಗೆ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ, ಎಷ್ಟು ಜನರ ಮೇಲೆ ಕೇಸನ್ನು ಹಾಕಿದ್ದೀರಿ, ಯಾರ್ಯಾರನ್ನು ಜೈಲಿಗೆ ಹಾಕಿದ್ದೀರಿ? ನೀವೇ ಕಾನೂನು ಬಾಹಿರವೆಂದು ಹೇಳಿದ್ದೀರಿ, ಈ ರೀತಿಯಾಗಿ ನೆಡಯುತ್ತಿದೆ ಎಂಬುದು ಗೊತ್ತಿದೆ, ಇದರ ಬಗ್ಗೆ ತಾವು ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕಲ್ಲಾ, ತೆಗೆದುಕೊಂಡಿದ್ದೇವೆ ಎಂದಾದರೂ ಕೂಡ ಹೇಳಬೇಕಲ್ಲವೇ? ಉದಾ: ಮೊನ್ನೆ ರಾಷ್ಟ್ರೀಯ ಹೆದ್ದಾರಿ–7 ರಲ್ಲಿ 4 ಲಾರಿಗಳನ್ನು ಹಿಡಿದುಕೊಂಡಿದ್ದಾರೆ, ನೀವು ಏನು ಹೇಳಿದ್ದೀರಿ, ಎಲ್ಲಾ ದಾಖಲೆಗಳು ಸರಿಯಾಗಿದೆ, ಅದರಲ್ಲಿರುವುದು ಏನೆಂದರೆ, ಆ ಲಾರಿಯಲ್ಲಿ ತೆಗೆದುಕೊಂಡು ಹೋಗುತ್ತಿರುವುದು ಆ ಥಿನ್ನರ್‌ಗೆ ಕೆಮಿಕಲ್ಸ್‌ನ್ನು ಮಿಕ್ಸ್ ಮಾಡಿ ಪೆಟ್ರೋಲ್‌ನ್ನಾಗಿ ಮಾಡಿ ಮಾರಾಟ ಮಾಡುತ್ತಿರುವುದು. ನೀವು ಆ ಲಾರಿಗಳಲ್ಲಿ ತೆಗೆದುಕೊಂಡು ಸಾಗಿಸುತ್ತಿರುವುದು ಕೊಯಮತ್ತೂರಿನ ಕಂಪನಿಗೆ ಎಂದು ಹೇಳಿದರೆ ನಾಲ್ಕು ಲಾರಿಗಳಲ್ಲಿ ಒಂದು ಲಾರಿ ಮಾತ್ರ ಕೊಯಮತ್ತೂರಿಗೆ ಹೋಗುತ್ತದೆ. ಉಳಿದ ಲಾರಿಗಳೆಲ್ಲಾ ಬೇರೆ ಬೇರೆ ಕಡೆಗಳಿಗೆ ಹೋಗಿ ಕೆಮಿಕಲ್ಸ್‌ನ್ನು ಮಾಡಿ ಪೆಟ್ರೋಲ್‌ನ್ನಾಗಿ ಪರಿವರ್ತಿಸಿ ಮಾಡುತ್ತಿದ್ದಾರೆ. ಇದು ನಡೆಯುತ್ತಿರುವ ಸಂಗತಿ. ಪ್ರತಿದಿನ ಹತ್ತಾರು ಲೋಡ್‌ಗಳಲ್ಲಿ ಥಿನ್ನರ್‌ಅನ್ನು ಅವರು ಎಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ? ಅದನ್ನು ಏತಕ್ಕಾಗಿ ತೆಗೆದುಕೊಂಡು ಹೋಗುತ್ತಾರೆ? ಅದರಲ್ಲಿ ಕೆಮಿಕಲ್ಸ್‌ನ್ನು ಮಿಕ್ಸ್ ಮಾಡಿ ಪೆಟ್ರೋಲ್